Doc-9
T-P-2

(1)

K No KRNN 12 21 - 1- 1975

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
- For Influeatial Publicity -

ಸ್ಥಾಪಕರು: ಅರಮನೆ ಸಿರಸ್ತೆದಾರ್ ಎಂ. ವಿ. ಮುಖ್ಯರಾವ್ ಸಂಪಾದಕರು: ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ (8 ಪುಟ

ತಾರಕಾ ಆಣೆಕಟ್ಟು ಎರಡು ವರ್ಷಗಳಲ್ಲಿ

ಜನಸಂಘದವರ ಹೇಳಿಕೆ

ದೆಹಲಿಯಲ್ಲಿ ಕಳ್ಳ ಸಾಗಾಣಿಕೆಗಾಗಿ ದಸ್ತಗಿರಿ ಮಾಡಲ್ಪಟ್ಟವರೆಲ್ಲ ರೂ 80 ರಿಂದ 40 ಲಕ್ಷ ಡೊನೇಷನ್‌ಗಳನ್ನಿತ್ತು ಅನಂತರ ಬಿಡುಗಡೆ ಮಾಡಲ್ಪಟ್ಟಿರುವರು. ಇತರ ರಾಜ್ಯಗಳಲ್ಲಿ ಹೊಸ ಶಾಸನ ರೀತ್ಯ ಕಳ್ಳ ಸಾಗಾಣಿಕೆದಾರರು ದಸ್ತಗಿರಿ ಮಾಡಲ್ಪಟ್ಟಿರುವಂತೆ. ಈ ದೆಹಲಿಯವರು ಮತ್ತೆ ಬಂಧಿತರಾಗಿಲ್ಲ ಎಂದು ಅಪಾಡಿಸಿ ಈ ವಿಚಾರದಲ್ಲಿ ಡಿಸ್ಕ್ರಿಯಾಂಗ್ ತನಿಖೆಯಾಗಬೇಕೆಂದು ಜನಸಂಘದ ಚೀಫ್ ವ್ಹಿಪ್ ಶ್ರೀ ವೇದಪ್ರಕಾಶ ಬೊರಾನ ನವ ದೆಹಲಿಯಲ್ಲಿ ತಿಳಿಸಿದರು

★

ಪತ್ರಕರ್ತರ ಸಮ್ಮೇಳನ

ಮಂಡ್ಯದಲ್ಲಿ ಪತ್ರಕರ್ತರ ಸಮ್ಮೇಳನವನ್ನು ಸೋಮವಾರ ಉದ್ಘಾಟಿಸುತ್ತಾ, ರಾಜ್ಯದ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರು. ನಾವು ಪತ್ರಿಕೆಗಳ ವಿಚಾರದಲ್ಲಿ ಹೆಚ್ಚು ಸ್ವಾತಂತ್ರ್ಯದಿಂದ ವರ್ತಿಸುತ್ತಿದ್ದರೂ, ಸರ್ಕಾರಿ ಪತ್ರಿಕೆಗಳ ಮೇರೆ ಹೆಚ್ಚಾಗಿ ಸ್ವಾತಂತ್ರ್ಯ ಹೊಂದಿಲ್ಲವೆಂದು ಹೇಳಿದರು ಸಣ್ಣ ಪತ್ರಿಕೆಗಳಿಗೆ ನೆರವಿನ ಭರವಸೆ ನೀಡಿದರು ಕೈಗಾರಿಕೆ ಮಂತ್ರಿಯವರಾದ ಶ್ರೀ ಎಸ್ ಎಂ ಕೃಷ್ಣರವರು ಸಮ್ಮೇಳನ ಬಿಡುಗಡೆ ಮಾಡಿದರು.

ಕರ್ನಾಟಕ ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರಾದ ಶ್ರೀ ಕೆ. ಪುಟ್ಟಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಮಂಡ್ಯ ಪೌರಸಭೆ ಸ್ವಾಗತಕೂಟವೇರ್ಪಡಿಸಿತ್ತು.

●

ವಿಶ್ವದ ಮೇಲಿನ ಅಧಿಕಾರಕ್ಕೆ ಕಮ್ಯೂನಿಷ್ಟ್ ಮತ್ತು ಅಮೇರಿಕ ಉನ್ನತ ಶಕ್ತಿಗಳ ಹೋರಾಟದಿಂದ ನುಸುಳಿಕೊಂಡು ವಿಶ್ವ ಯುದ್ಧಕ್ಕೆ ಮಾರ್ಗವಾಗುವುದೆಂದು ಡೆಪ್ಯೂಟಿ ಸ್ಪೀಕರ್ ಜಿ ಎಲ್ ಪೈ ಪಾಂಡಿಚೇರಿಯಲ್ಲಿ ತಿಳಿಸಿರುವರು.

ಹೃದಯಾಘಾತದಿಂದ ಮರಣ

ಬ್ಯಾಂಗ್‌ಕಾಕ್‌ನಿಂದ ಬಂದಿರುವ ವರದಿಯ ಪ್ರಕಾರ, ಪೂರ್ವದ ಥಾಯ್ಲಾಂಡಿನಲ್ಲಿ ಆಗ ಭೀಕರ ಅಪಘಾತವೊಂದರಲ್ಲಿ 239 ಕ್ಕೆ ಹೆಚ್ಚಾಗಿ ಜನರು ಸತ್ತಿರುವರು.

●

ಉಪಾಧ್ಯಾಯರ ನಿರ್ಧಾರ

ತಮ್ಮ ಕೇಳಿಕೆಗಳನ್ನು ನೆರವೇರಿಸಿಕೊಡದ ಹೊರತು ವಿಶ್ವವಿದ್ಯಾನಿಲಯದ ಸರ್ವ ಪರೀಕ್ಷೆಗಳನ್ನು ಬಹಿಷ್ಕರಿಸಲು ಬೊಂಬಾಯಿ ಉಪಾಧ್ಯಾಯರು ನಿರ್ಧರಿಸಿರುವರೆಂದು ಬೊಂಬಾಯಿ ಪ್ರಾರ್ತ ತಿಳಿಸುತ್ತದೆ.

★

ಕಾವೇರಿ ಬಗ್ಗೆ ಚೀಪಾರ್ಸನ

ಕಾವೇರಿ ಕೀಳು ಸಮಸ್ಯೆ ಅದಷ್ಟು ಬೇಗ ಪರಿಹಾರವಾಗುವ ರೀತಿಯ ಕೇಂದ್ರ ತೀರ್ಪು ಯೋಚನೆ ಹೊಂದಿದೆ ಎಂದು ಕೇಂದ್ರ ವ್ಯವಸಾಯ ಮಂತ್ರಿ ಶ್ರೀ ಶಿಂಧೆ ಮುದರಾಸಿನಲ್ಲಿ ನುಡಿದರು.

★

ತಾರಕಾ ಅಣೆಕಟ್ಟು

ತಾರಕಾ ಅಣೆಕಟ್ಟನ್ನು ೩ ವರ್ಷಗಳಲ್ಲಿ ಮುಗಿಸಲು ಸರ್ಕಾರದ ತೀರ್ಮಾನ ಯೋಜನೆಯಾಗಿದೆಯೆಂದು ಹೂಡಾಪುರದಲ್ಲಿ ಒಂದು ಅಕೋಗ್ಯ ಕೇಂದ್ರಕ್ಕೆ ಶಂಕುಸ್ಥಾಪನೆ ನೆರವೇರಿಸುತ್ತಾ ಮುಖ್ಯ ಮಂತ್ರಿ ಶ್ರೀ ಪಿ. ವೀ ವರಾಜ ಅರಸ್‌ರು ತಿಳಿಸಿದರು.

●

ಸಮಿತಿ ರಚನೆ

ಶ್ರೀ ಜಯಪ್ರಕಾಶರ ಚಳವಳಿಗೆ ಸ್ಪಂದಿಸಲು ಸಚಿವರುಗಳು ಸಭಾಸದ ವಿಧಾನ ಪರಿಷತ್ ಪ್ರತಿನಿಧಿಗಳು ಹಾಗೂ ಕೆಲವು ವಿರೋಧ ಪಕ್ಷಗಳ ಪ್ರತಿನಿಧಿಗಳ ಸಮಿತಿ ಗುಲ್ಬರ್ಗಾದಲ್ಲಿ ರಚಿಸಲಾಗಿದೆ.

ನಿಪುಣರ ಅಭಿಪ್ರಾಯ

ಭಾರತವು ಒಂದು ಸೂಕ್ತ ಕಾರ್ಯಕ್ರಮ ಕೈಗೊಂಡಿಕೆ ಕೆಲವು ವರ್ಷಗಳಲ್ಲಿಯೇ ಹಿರಿಯ ಉಣ್ಣೆ ರಫ್ತು ಮಾಡುವ ದೇಶವಾಗುವೆಂದು ಈ ಸಂಬಂಧದ ಭಾರತ-ಆಸ್ಟ್ರೇಲಿಯ ಜಂಟಿ ಯೋಜನೆಯ ಕುರಿತು ನಿಪುಣರು ಇಲ್ಲಿ ದೆಹಲಿಯಲ್ಲಿ ಅಭಿಪ್ರಾಯಪಟ್ಟಿರುವರು.

●

ಪರದಿ ಪ್ರಕಟಣೆ

ಅಕ್ಟೋಬರು 6 ರಂದು, ಬೀಹಾರ ಗುಜರಾತ 3 ನೇ ಮತ್ತು ಕಡೆಯ ದಿನವೆಂದು ಪೋಲೀಸರ ಗೋಳೀಬಾರು ದ್ವೇಷದಿಂದ ಹೂತ್ತವೇ ಅಲ್ಲದೆ ಪ್ರಮಾಣ ಮೀರಿ ಹೆಚ್ಚಿತೆಂದು ಈ ವಿಚಾರದಲ್ಲಿ ಶ್ರೀ ಜಯಪ್ರಕಾಶ ನಾರಾಯಣರು ಬಿಹಾರು ಪಬ್ಲಿಕ್ ಸರ್ವಿಸ್ ಕಮೀಷನ್‌ನ್ನಿನ ಮಾಜಿ ಚೇರ್ಮೆನ್‌ರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ತ್ರಿ ಸದಸ್ಯ ಸಮಿತಿ ಪಾಟ್ನಾದಲ್ಲಿ ಪತ್ರಿಕೆಯವರಿಗಿತ್ತ ವರದಿಯಲ್ಲಿ ತಿಳಿಸಿದೆ.

●

ಪಾರ್ಲಿಮೆಂಟಿಗೆ ಮನವಿ ಅರ್ಪಿಸಲು

ನವದೆಹಲಿ— 200000 ಶಿಕ್ಷಕೇತರ ಕೆಲಸಗಾರರು ಲೋಕಸಭೆಗೆ ಮನವಿಪತ್ರ ಅರ್ಪಿಸಲು ಮಾರ್ಚ್ 31 ರಂದು ಪೆರೇಡಣಿಗೆಯಲ್ಲಿ ಪಾರ್ಲಿಮೆಂಟು ಭವನಕ್ಕೆ ಹೋಗಲಿರುವರೆಂದು ರೈಲ್ವೇ ಕೆಲಸಗಾರರ ಸಂಘದ ಅಧ್ಯಕ್ಷ ಶ್ರೀ ಜಾರ್ಜ್ ಫರ್ನಾಂಡಿಸ್ ರವರು ಹೇಳಿರುವರು.

ಗಣರಾಜ್ಯೋತ್ಸವ

ಮೈಸೂರು— ನಗರದಲ್ಲಿ ಈ ವರ್ಷದ ಗಣರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಏರ್ಪಡಿಸಲಾಗಿದೆ.

★

ಜೆ ಪಿ ಚಳವಳಿ ಫಲ

ದಾವಣಗೆರೆ— ಸರಕಾರವು ಕಳ್ಳಸಾಗಾಣಿಕೆಗಾರರ ಮೇಲೆ ಕ್ರಮಕ್ಕೆ ಕೈಗೊಂಡಿರುವುದು ಶ್ರೀ ಜಯಪ್ರಕಾಶನಾರಾಯಣರ ಚಳವಳಿಯಿಂದಾದ ಪ್ರಥಮ ವಾಸ್ತವಿಕವಾಹ ಫಲವೆಂದು ಅವರ ಹತ್ತಿರ ಪಡಾಯುಕರಾಗಿರುವ ಪ್ರೊ || ಥಾಕೂರದಾಸ್ ಬಂಗ್ ಇಲ್ಲಿ ನಡೆದ ಕೆಲ ಪಕ್ಷಗಳ ಸಭೆಯಲ್ಲಿ ಹೇಳಿದರು - ದೇಶದಲ್ಲಿ ಪ್ರಜಾರಾಜ್ಯ ರಕ್ಷಣೆಗಾಗಿ, ಆಡಳಿತ ಮತ್ತು ವಿರೋಧ ಪಕ್ಷಗಳ ಸುಧಾಕರಣೆ ಮಾಡುವುದೂ ಜಯಪ್ರಕಾಶರ ಆಶಯವೆಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

●

ರಾಜ್ಯಗಳಿಗೆ ನೆರವು ಹೆಚ್ಚಿಸಲು

ನವದೆಹಲಿ— ರಾಜ್ಯಗಳಿಗೆ ಕೇಂದ್ರ ಯೋಜನಾ ನೆರವನ್ನು ಹೆಚ್ಚಿಸಲು ಪ್ಲಾನಿಂಗ್ ಕಮಿಷನ್‌ಗೆ ಮನಸ್ಸಿಲ್ಲವೆಂದು ವ್ಯಕ್ತವಾಗಿದೆ.

★ಗುಲ್ಬರ್ಗಾದಲ್ಲಿ ಪೋಲೀಸರ ದಬ್ಬಾಳಿಕೆ ಪ್ರತಿಭಟಿಸಿ ಸರ್ಕಾರಿ ಬಸ್ ಡ್ರೈವರು, ಕಂಡಕ್ಟರುಗಳು ಮೂರು ಗಂಟೆಗಳ ಕಾಲ ಚಿವ ನುಷ್ಕರ ನಡೆಸಿದರು.

★ ತಾಲೂ ಹೃದಯ ಮಂಗಳೂರಿನ ಶಾಲೆ ಕೊಡಿ — ಬೀಜೇರ್.

For Large Range of Daily Wear
Nylex, Cotton, Voile, etc Sarees
in up-to-date Designs
Please Visit :
Bank Road Bahusar

(2)

ಪ್ರತಿಭಟನಾ ದಿನ

ರಾಯಪುರ— ಶಾಜಹಂದಗಾಂ ಮತ್ತು ಉಗ್ರಾ ಜಿಲ್ಲೆಗಳ ಜನಸಂಘರ್ಷ ಸಮಿತಿಗಳು ಮಾಧ್ಯಮಿಕ ಶಾಲೆಗಳ ಮತ್ತು ವಿದ್ಯಾರ್ಥಿ ಸಂಘರ್ಷ ಸಮಿತಿಗಳು ಗಣರಾಜ್ಯವನ್ನು ಪ್ರತಿಭಟನಾ ದಿನವನ್ನಾಗಿ ಆಚರಿಸಲು ನಿರ್ಧರಿಸಿ, ತಮ್ಮ ಸ್ವತಂತ್ರ ಕಾರ್ಯಕ್ರಮವನ್ನು ಘೋಷಿಸಿದ್ದಾರೆ.

★

ಕೇಂದ್ರಕ್ಕೆ ವರದಿ ಒಪ್ಪಿಸಬೇಕು

ಲಕ್ನೊ— ರಾಜ್ಯಗಳು ಅವಶ್ಯ ಪದಾರ್ಥಗಳ ಸಾಗಾಟಕ್ಕೆ ವಿಧಿಸಿರುವ ನಿಬಂಧನೆಗಳ ಬಗ್ಗೆ ಕೇಂದ್ರಕ್ಕೆ ಪ್ರತಿವಾರ ತಂತಿಯನ್ನೂ, ಪ್ರತಿ ಪಕ್ಷ ವರದಿಯನ್ನೂ ಕಳುಹಿಸಲು ಸೂಚಿಸಲಾಗಿದೆ.

★

ಹೂಹುತರು

ಜರೋಡಾ— ತಾವು ಯೋಜಿಸಿರುವ ಪೂರ್ಣ ಕ್ರಾಂತಿಯಿಂದ ನೂತನ ಸಮಾಜ ರಚನೆ, ಹೂತನ ಬೀಜಾರೂ, ನೂತನ ಭಾರತ ಹೊರಬರುವುದಾಗಿ ಶ್ರೀ ಜಯಪ್ರಕಾಶ ನಾರಾಯಣರು ಇಲ್ಲಿರಂಗ ಸಭೆಯಲ್ಲಿ ಹೇಳಿದರು — ಆದರೆ ಪೂರ್ಣ ಕ್ರಾಂತಿಯಿಂದ ಹುಟ್ಟು ಅನೆಯಂತೆ ಹುಚ್ಚುಚ್ಚಾಗಿದರೆ, ತಾವೂ ಮತ್ತು ತಮ್ಮಂತಹ ನಾಯಕರು ಮಾನವಿಗರ ಕಾರ್ಯ ನಡೆಸುವುದಾಗಿ ಹೇಳಿದರು.

★

ಕಂಬಡಕಡ ಪ್ರಾಜೆಕ್ಟ್

ಮಡಕೇರಿ— ಅನೇಕ ಕಡೆಗಳಿಂದ ಪ್ರತಿಭಟನೆ ಇದ್ದರೂ ಕಂಬಡಕಡ ಪ್ರಾಜೆಕ್ಟ್ ಕೈಗೊಳ್ಳಲಾಗುವುದೆಂದು ಮುಖ್ಯಮಂತ್ರಿಯವರು ಹೇಳಿಕೆ ನೀಡಿ ವರದಿಯಾಗಿದೆ.

ವುಡ್‌ಲಾಂಡ್ಸ್ 17|1 75 ರಿಂದ

ಅಮೋಘ ಆರಂಭ

ಗೂಂಜ್

ಅಪೂರ್ವ ಫೂಜ ಕಲರ್ ಹಿಂದಿ ಕಲಾಕೃತಿ

ಪಾತ್ರ– ಮಹೇಂದ್ರ ಸಾಂಡು, ರಾಜೇಶ್, ಬಿಂದು ದಿನ 5 ಪ್ರದರ್ಶನಗಳು

ಅಪೆರಾ 17 I 75 ರಿಂದ

ಸ್ವಯಂವರ

ಅಮೋಘ ಕನ್ನಡ ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Help The Gorakshana

—Humanitarian Propaganda Monthly....

Protect the Cow

Quality Printing Neat Binding

Lakshminarasimha Press

Sivarampet, Mysore 1

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Contribute Liberally

to the National Defence Fund

Edited Printed and Published by Dharmapeethacharata M S. Krishna Rao (Proprietor) at the Sarvamudi Press, Chamarajapuram Mysore